ಅರ್ಚನೆ ಮಾಡಿದರು. ಅನ್ನಾಹಾರಗಳನ್ನು ತ್ಯಜಿಸಿ ಶಿವಸ್ತುತಿ ಮಾಡುತ್ತಾ, ಶಿವನು ನಿದ್ರಿಸದಂತೆ ನೋಡಿಕೊಂಡು ಇಡೀ ರಾತ್ರಿ ಕಳೆದರು. ಮರುದಿನ ಸೂರ್ಯನು ಉದಯಿಸಿದಾಗ ಚೇತರಿಸಿಕೊಂಡ ಶಿವನನ್ನು ಎಲ್ಲ ಸುರಾಸುರರೂ ಅತ್ಯಂತ ಹರ್ಷಚಿತ್ತರಾಗಿ, ಮತ್ತೆ ಮತ್ತೆ ಬಿಲ್ವಪತ್ರೆ, ತುಂಬೆ ಹೂವುಗಳು ಮುಂತಾದವುಗಳಿಂದ ಅರ್ಚಿಸಿ, ಅವನ ಕೃಪಾಕಟಾಕ್ಷವನ್ನು ಪಡೆದರು.

### ಮಹಾಶಿವರಾತ್ರಿಯ ವೈಶಿಷ್ಟ್ಯ: ಆಚರಣೆ

ಪ್ರತಿ ಅಮಾವಾಸ್ಯೆಯ ಹಿಂದಿನ ದಿನವನ್ನು 'ಮಾಸಶಿವರಾತ್ರಿ' ಎಂದೂ, ಮಾಘಮಾಸದ ಬಹುಳ ಚತುರ್ದಶಿಯ ದಿನವನ್ನು 'ಮಹಾಶಿವರಾತ್ರಿ' ಎಂದೂ ಭಾವಿಸಿ, ಈ ದಿನಗಳಲ್ಲಿ ಶಿವನನ್ನು ಭಜಿಸುವ ಭಕ್ತಾದಿಗಳ ಸಂಖ್ಯೆ ಅಗಣಿತ. ಶಿವನನ್ನು ಲಿಂಗರೂಪದಲ್ಲಿ ಸಾಕಾರ ಪೂಜೆ ಮಾಡುವುದು ಬಹು ಹಿಂದಿನಿಂದಲೂ ನಡೆದುಬಂದ ಆಚರಣೆ. ಶೈವಾಗಮಗಳಲ್ಲಿ ಲಿಂಗಪೂಜೆಯ ಬಗೆಗೆ ಬಹಳ ಸುಂದರವಾದ ನಿರೂಪಣೆ ಇದೆ. ಲಿಂಗತತ್ತ್ವವು ಬಹು ಗಹನವಾದ ಅರ್ಥವನ್ನೊಳಗೊಂಡಿದೆ. ಲಿಂಗವು 'ರೂಪ'ವೂ ಅಲ್ಲ; 'ಅರೂಪ'ವೂ ಅಲ್ಲ, 'ಸಾಕಾರ'ವೂ ಅಲ್ಲ, 'ನಿರಾಕಾರ'ವೂ ಅಲ್ಲ. ಸಾಕಾರದಿಂದ ನಿರಾಕಾರಕ್ಕೆ ಎಂದರೆ ಸಗುಣೋಪಾಸನೆಯಿಂದ ನಿರ್ಗುಣೋಪಾಸನೆಗೆ ಏರಲು ಇದೊಂದು ಸಾಧನವಿಶೇಷ. ಬೃಹತ್ ವಿಶ್ವವೇ ಒಂದು ಲಿಂಗವೆಂಬ ಭಾವಕ್ಕೆ 'ಸಾಕಾರ' ರೂಪದ ಲಿಂಗ ಒಂದು ಅರುಹಿನ ಕುರುಹು ಆಗಿದೆ. ಕುರುಹು ಇಲ್ಲದಿದ್ದರೆ ಅರುಹು ಅಸಾಧ್ಯ. ಸೀಮಾತೀತವಾದುದನ್ನು ಸಾಂತವಾಗಿ ಸಾಕಾರರೂಪದಲ್ಲಿ ತೋರಿಸಲು ಲಿಂಗ ಒಂದು ದಿವ್ಯ ಸಾಧನ. 'ಈಶ್ವರನು ಸರ್ವವ್ಯಾಪಿ' ಎಂಬ ರಹಸ್ಯವನ್ನು ಲಿಂಗವು ಸಾರುತ್ತದೆ. ಲಿಂಗವು ಪರಾತ್ಪರ ವಿಶ್ವಮೂರ್ತಿಯ ಸಂಕೇತ. ಅಂತಹ ಲಿಂಗದ ಅನುಸಂಧಾನವು ನಿತ್ಯಾನಂದವನ್ನು ಕೊಡುವುದು. ಭಾವ-ಕ್ರಿಯೆಗಳ ಪರಿಶುದ್ಧಿಯಿಂದ ಲಿಂಗಪೂಜಾವಿಧಾನವನ್ನು ನಡೆಸಬೇಕು. ಯಾರು ಶಾಸ್ತ್ರೋಕ್ತವಾಗಿ ಲಿಂಗವನ್ನು ಪ್ರತಿಷ್ಠಾಪಿಸಿ ಪೂಜಿಸುತ್ತಾರೋ ಅವರು ಸಾಕ್ಷಾತ್ ಶಿವಸ್ವರೂಪ ಉಳ್ಳವರಾಗುವರು. **"ಶಿವಲಿಂಗವಂ ಪ್ರತಿಷ್ಠಿಸಿದವಂ ಶಿವನೇ ಅಕ್ಕುಂ"** ಎಂಬ ಮಾತು ಹಿಂದಿನ ಶಾಸನಗಳಲ್ಲಿ ಉಂಟು.

### ಶಿವಪೂಜಾ ಸುದುರ್ಲಭಮ್

**'ಮಾಘ ಕೃಷ್ಣ ಚತುರ್ದಶ್ಯಾಂ ಶಿವಪೂಜಾ ಸುದುರ್ಲಭಮ್'** ಎಂಬ ಉಕ್ತಿ ಜಗದ್ವಿಖ್ಯಾತವಾಗಿದೆ. ಅಂದು ಉಪವಾಸ ಮಾಡುವ ಪರಂಪರೆ ಇದೆ. 'ಉಪ' ಎಂದರೆ ಸಮೀಪದಲ್ಲಿ, 'ವಾಸ' ಎಂದರೆ ಇರುವುದು. ಭಗವಂತನ ಬಳಿ ಇರುವುದು ಎಂಬುದೇ 'ಉಪವಾಸ' ಶಬ್ದದ ನಿಜವಾದ ಅರ್ಥ. ಪ್ರಿಯವಾದವರ ಬಳಿ ಇರುವಾಗ, ಪ್ರಿಯವಾದ ಕೆಲಸ ಮಾಡುವಾಗ ಆಹಾರದ ಕಡೆ ಗಮನ ಹೋಗದು. ಅಂತೆಯೇ ಉಪವಾಸಕ್ಕೆ ಆಹಾರ ಸೇವಿಸದೇ ಇರುವುದು ಎಂಬ ಅರ್ಥವ್ಯಾಪ್ತಿಯೂ ಇದೆ. ತೀರ ಅಸಮರ್ಥರಾಗಿದ್ದರೆ ಕ್ಷೀರಾಹಾರ ಅಥವಾ ಫಲಾಹಾರ ಸ್ವೀಕರಿಸಬಹುದು. ಉಪವಾಸವ್ರತದಿಂದ ಪಂಚೇಂದ್ರಿಯಗಳಿಗೆ ವಿಶ್ರಾಂತಿ ದೊರೆತು, ಅವು ಇನ್ನೂ ಹೆಚ್ಚು ಚುರುಕಾಗುತ್ತವೆ. 'ಮನಸ್ಸು' ಕೂಡ ಕ್ರಿಯಾಶೀಲವಾಗಿದ್ದುಕೊಂಡು, ಸುಖ-ಸಂತೋಷ-ಶಾಂತಿ ಪ್ರಾಪ್ತವಾಗುತ್ತದೆ. ಉಪವಾಸದಿಂದ ಉದರಶುದ್ಧಿ, ಧಾತು ಸಮತೋಲನ ಮುಂತಾದ ಶಾರೀರಿಕ ಫಲಗಳೂ ಇದ್ದೇ ಇವೆ.

ಜಾಗರಣೆ ಎಂದರೆ ಆ ರಾತ್ರಿಯ ನಾಲ್ಕೂ ಜಾವಗಳಲ್ಲಿ (ಯಾಮ) ಶಿವಸಾನ್ನಿಧ್ಯದಲ್ಲಿ ಇದ್ದುಕೊಂಡು, ಶ್ರೀಶಿವ ಸಹಸ್ರನಾಮ, ಶ್ರೀರುದ್ರಪ್ರಶ್ನ, ಚಮಕಪ್ರಶ್ನ, ಪ್ರಣವ ಮಂತ್ರ, ಪಂಚಾಕ್ಷರಿ ಮಂತ್ರ, ಷಡಕ್ಷರಿ ಮಂತ್ರ, ಕೈವಲ್ಯೋಪನಿಷತ್ತು, ಶೀರ್ಷೋಪನಿಷತ್ತು, ಶಿವಭಜನೆ, ಶಿವಕೀರ್ತನೆ, ಶಿವಸಂಬಂಧ ಕಥಾಶ್ರವಣ – ಇವೇ ಮೊದಲಾದುವನ್ನು ನಿಷ್ಕಾಮವಾಗಿ ಭಗವತ್‌ಪ್ರೀತಿಯಿಂದ ಪಾರಾಯಣ ಮಾಡುತ್ತ ಅರ್ಥಪೂರ್ಣವಾಗಿ ರಾತ್ರಿಯನ್ನು ಕಳೆಯುವುದು. ಶಿವಭಾವವು ಹೃದಯದಲ್ಲಿ ಸ್ಥಿರವಾಗಿ ಉಳಿಯಬೇಕೆಂಬುದೇ ಜಾಗರಣೆಯ ಮೂಲಭೂತ ಉದ್ದೇಶ. ಕೇವಲ ನಿದ್ರೆ ಬಿಟ್ಟು ಅನ್ಯಕಾರ್ಯಗಳಲ್ಲಿ ಮಗ್ನನಾಗುವುದು ಜಾಗರಣೆ ಅನ್ನಿಸಿಕೊಳ್ಳುವುದಿಲ್ಲ.

ಮಹಾಶಿವರಾತ್ರಿಯ ಒಂದು ರಾತ್ರಿ ಮಾಡಿದ ಶಿವಾರಾಧನೆಯು, ಒಂದು ವರ್ಷವೆಲ್ಲ ಪ್ರತಿದಿನ ಮಾಡಿದ ಶಿವಪೂಜೆಗೆ ಸಮಾನ ಎಂಬುದಾಗಿ 'ರುದ್ರಸಂಹಿತೆ' ತಿಳಿಸುತ್ತದೆ. ಈ ಜಗವೇ ಶಿವನ ಲೀಲಾರಂಗ. ಶಿವಕೃಪೆಯಿಂದಲೇ ಆಯುಸ್ಸು, ಆರೋಗ್ಯ, ಐಶ್ವರ್ಯ, ಸುಖ-ಸಂಪತ್ತು ಲಭಿಸುತ್ತದೆ ಎಂಬುದಾಗಿ 'ಶ್ರೀಶಿವರಹಸ್ಯ'ದಲ್ಲಿ ತಿಳಿಸಲಾಗಿದೆ. 'ಅಲ್ಪ'ವನ್ನೇ 'ಕಲ್ಪ'ವೆಂದು ಸ್ವೀಕರಿಸುವ ಲಿಂಗರೂಪಿ ಶಿವನ ಪೂಜೆಗೆ ಮತ-ಕುಲ-ವರ್ಣ-ಸ್ತ್ರೀ-ಪುರುಷ ಎಂಬ ಭೇದವಿಲ್ಲ. ಐಶ್ವರ್ಯ, ಅಂತಸ್ತು, ಆಡಂಬರಗಳ ಭೇದವಿಲ್ಲ. ಬಿಲ್ವಪತ್ರೆ, ನೀರು, ತುಂಬೆ-ಹೂ, ಎಕ್ಕೆ ಹೂ, ಶುದ್ಧಮನಸ್ಸಿನ ಭಕ್ತಿ ಭಾವ – ಇವುಗಳು ಇದ್ದರೆ ಸಾಕು. ತ್ರಿಗುಣಾಕಾರನೂ, ತ್ರಿನೇತ್ರನೂ, ತ್ರಿಶೂಲಧಾರಿಯೂ ಆದ

ಲಿಂಗರೂಪಿ ಶಿವನನ್ನು ತ್ರಿದಳಗಳಿಂದ ಕೂಡಿದ, ಒಡೆದುಹೋಗಿರದ, ಕೋಮಲವಾದ ಬಿಲ್ವಪತ್ರೆಗಳಿಂದ ಪೂಜಿಸಿದವರ ತ್ರಿಜನ್ಮಪಾಪ ಸಂಹಾರವಾಗುವುದೆಂಬುದು ಪುರಾಣೋಕ್ತ ಸಂಗತಿ. ಶಿವನು ಅಭಿಷೇಕಪ್ರಿಯ. **ಅಲಂಕಾರಪ್ರಿಯೋ ವಿಷ್ಣುಃ ಅಭಿಷೇಕಪ್ರಿಯೋ ಶಿವಃ ನಮಸ್ಕಾರಪ್ರಿಯೋ ಭಾನುಃ ಶಿವಸ್ತೋತ್ರಪ್ರಿಯೋ ಗಣಾಃ** – ವಿಷ್ಣುವು ಅಲಂಕಾರಪ್ರಿಯನು, ಶಿವನು ಅಭಿಷೇಕಪ್ರಿಯನು, ಸೂರ್ಯನು ನಮಸ್ಕಾರಪ್ರಿಯನು. ಹೀಗೆ ರುದ್ರಾಭಿಷೇಕ ಶಿವನಿಗೆ ಅತಿ ಪ್ರಿಯವಾದುದು. 'ಹರಿವಂಶ'ದಲ್ಲಿ ಶ್ರೀಕೃಷ್ಣನೂ 'ರುದ್ರ ಜಪ' ಮಾಡಿದನೆಂದು ಹೇಳಲಾಗಿದೆ. "ಕೈಲಾಸವಾಸ ಗೌರೀಶ ಈಶ ತೈಲಧಾರೆಯಂತೆ ಮನಸು ಕೊಡು ಹರಿಯಲ್ಲಿ" ಎಂದು ವಿಜಯದಾಸರು ವಿಷ್ಣುಭಕ್ತಿಯನ್ನು ಕೊಡುವಂತೆ ಈಶ್ವರನಲ್ಲಿ ಬೇಡಿಕೊಂಡಿದ್ದಾರೆ. ನಮ್ಮ ಹುಟ್ಟು ಅಳುವಿನಿಂದ ಪ್ರಾರಂಭವಾಗುತ್ತದೆ. **ರುದಂ ದ್ರಾವಯತಿ ಇತಿ ರುದ್ರಃ** ಎಂದರೆ ರೋದನವನ್ನು (ತಾಪತ್ರಯಗಳನ್ನು) ದೂರಮಾಡುವವನೇ ರುದ್ರ. ರುದ್ರಾಭಿಷೇಕದಿಂದ ರುದ್ರನನ್ನು ಅಂದರೆ ಶಿವನನ್ನು ತೃಪ್ತಿಪಡಿಸಿದಾಗ, ಆ ಪಶುಪತಿಯು ನಮ್ಮಲ್ಲಿರುವ ಪಶುತ್ವವನ್ನು ದೂರ ಮಾಡಿ ನಮಗೆ ಶುಭಪರಂಪರೆಗಳನ್ನು ಕರುಣಿಸುತ್ತಾನೆ.



## ಶಿವರಾತ್ರಿಯ ದಿವ್ಯಸಂದೇಶ

ಶಿವಪರವಲ್ಲದ್ದನ್ನು ಅಂದರೆ ಅಶುಭವಾದುದನ್ನು ಆಲೋಚಿಸಬಾರದು, ಆಡಬಾರದು, ನೋಡಬಾರದು, ಕೇಳಬಾರದು, ಮಾಡಬಾರದು ಹಾಗೂ ಪ್ರೋತ್ಸಾಹಿಸಲೂಬಾರದು ಎಂಬುದೇ ಶಿವರಾತ್ರಿಯ ಸಂದೇಶ ಹಾಗೂ ಅಂತರಾರ್ಥ. ಸಾಧನೆ, ಅಂದರೆ ತಪಸ್ಸಿನಿಂದ ಇದು ಸಾಧ್ಯ. ಸಾಧಕನಿಗೆ ದೃಢಸಂಕಲ್ಪ, ಶ್ರದ್ಧೆ ಮತ್ತು ಆತ್ಮವಿಶ್ವಾಸಗಳು ಬಹಳ ಅವಶ್ಯಕ. ಅದು ಅವನನ್ನು ಗಮ್ಯಸ್ಥಾನದತ್ತ ಮುನ್ನಡೆಸುತ್ತದೆ. 'ಶಿವ' ಶಬ್ದಕ್ಕೆ 'ಮಂಗಳ', 'ಶುಭ' ಎಂಬ ಅರ್ಥಗಳೂ ಇವೆ. ಆದ್ದರಿಂದ ಶಿವನಂತೆ 'ಸಮದೃಷ್ಟಿ' ಹೊಂದಿ, ಲೋಕಹಿತದ ಕಾರ್ಯಗಳಲ್ಲಿ ಮಗ್ನರಾಗಬೇಕೆಂಬುದೇ ಮಹಾಶಿವರಾತ್ರಿಯು ಮನುಕುಲಕ್ಕೆ ನೀಡುವ ವಿಶೇಷ ಸಂದೇಶ. ನಮ್ಮ ಮುಖ 'ಶಿವಮುಖ'ವಾಗಲು, ನಮ್ಮ ಬಾಳು ಬರಡಾಗದೆ ಸುಭಿಕ್ಷವಾಗಲು, ಕ್ಷಾಮ ದೂರವಾಗಿ ಕ್ಷೇಮ ನೆಲೆಸಲು, ನಾವು ಪಶುತ್ವವನ್ನು ಕಳೆದುಕೊಂಡು 'ಪಶುಪತಿ'ಯತ್ತ ಮುನ್ನಡೆಯಲು ಮಹಾಶಿವರಾತ್ರಿಯ ಆಚರಣೆ ಪೂರಕ–ಪ್ರೇರಕ ಎನ್ನಬಹುದು.

## ಹೀಗೆ ನಾವು ಭಾವಿಸಬಾರದು

ಮುನ್ನೂರ ಅರುವತ್ತೈದು ದಿನಗಳಿಗೊಮ್ಮೆ ಒಂದು ದಿನ ಶಿವರಾತ್ರಿ ಬರುತ್ತದೆ ಎಂದು ನಾವು ಭಾವಿಸಬಾರದು. ಮುಂಬರುವ ಪ್ರತಿದಿನದಲ್ಲೂ ನಾವು ಶಿವರಾತ್ರಿಯ ಅಂತರಾರ್ಥವನ್ನು (ವಿಶುದ್ಧ ವಿಚಾರ, ಪರಿಶುದ್ಧ ಕಾಯಕ) ಮರೆಯದೆ, ಅದನ್ನು ನಮ್ಮ ಬಾಳಿನಲ್ಲಿ ರೂಢಿಸಿಕೊಳ್ಳಬೇಕೆಂಬ ಹಂಬಲವನ್ನು ಪ್ರಚೋದಿಸುವ ಸಲುವಾಗಿ ವರುಷಕ್ಕೊಮ್ಮೆ ಶಿವರಾತ್ರಿ. ನಿತ್ಯವೂ ಶಿವರಾತ್ರಿಯನ್ನು ಆಚರಿಸುವ, ಆರಾಧಿಸುವ ಶಕ್ತಿಯನ್ನು ಸಂಪಾದಿಸುವ ದಿಶೆಯಲ್ಲಿ ನಮ್ಮ ಪ್ರಯತ್ನ ಇರಬೇಕು. ಇಂಥ ಯತ್ನವೇ ನಮ್ಮನ್ನು ಭೌತಿಕತೆಯಿಂದ ದೇವತ್ವದ ನೆಲೆಗೆ ಏರಿಸಲು ಸಹಕಾರಿ, ಲೋಕಕಲ್ಯಾಣಕ್ಕೆ ರಹದಾರಿ. ಬಸವಣ್ಣನವರು ಹೇಳಿದಂತೆ, "ಅಂತರಂಗ ಬಹಿರಂಗ ಶುದ್ಧಿಯುಳ್ಳ ವ್ಯಕ್ತಿಯ ಶರೀರವೇ ಶಿವನ ಆವಾಸಸ್ಥಾನವಾದ ಕೈಲಾಸ" ವಾಗಿರುತ್ತದೆ. **ತನ್ಮೇ ಮನಃ ಶಿವಸಂಕಲ್ಪಮಸ್ತು** – "ನನ್ನ ಮನಸ್ಸಿನಲ್ಲಿ ಮಂಗಳಕರವಾದ ಸಂಕಲ್ಪವು ಮೂಡಲಿ" ಎನ್ನುವುದೇ ನಮ್ಮ ಪ್ರಾರ್ಥನೆಯಾಗಲಿ.

## ಹೀಗೊಂದು ಪ್ರಾರ್ಥನೆ

"ಓ ಸಜ್ಜನರಿಗೆ ಶುಭಕರನೇ, ಓ ದುರ್ಜನರಿಗೆ ಭಯಂಕರನೇ! ತನ್ನ ಅರ್ಧ ಶರೀರವನ್ನು ಶಿವೆಗಿತ್ತವನೇ, ನಿನಗೆ ವಂದನೆ. ನಮ್ಮ ಬಾಳಿನ ಅಶುಭಗಳನ್ನೆಲ್ಲ ಪರಿಹರಿಸು. ಓ ಮನೋಹರನೇ, ಓ ಭವಹರನೇ! ನಿನಗೆ ವಂದನೆ. ಅನುದಿನವೂ ನನ್ನ ಒಳಗಣ್ಣು ಎಚ್ಚರವಾಗಿರುವಂತೆ ಅನುಗ್ರಹಿಸು. ಓ ಭವನೇ! ಓ ಭವವನ್ನು ಗೆದ್ದವನೇ, ಓ, ಸಂಪತ್ತುಗಳ ನೆಲೆಮನೆಯೇ, ನಿನಗೆ ವಂದನೆ. ನನಗೆ ದೈವೀ ಸಂಪತ್ತನ್ನು ಕರುಣಿಸು. ಓ ಮೃಡನೇ, ನಿನಗೆ ವಂದನೆ, ಮತ್ತೆ ಮತ್ತೆ ವಂದನೆ. ಓ ಉಮೆಯರಸನೇ! ನಿನಗೆ ವಂದನೆ; ಮತ್ತೊಮ್ಮೆ ಮಗದೊಮ್ಮೆ ನಿನಗೆ ವಂದನೆ" (ಕವಿ ನಾರಾಯಣ ಪಂಡಿತಾಚಾರ್ಯ ವಿರಚಿತ 'ಶಿವಸ್ತುತಿ'ಯ ಕನ್ನಡಾನುವಾದ). •

# ಪುಷ್ಪ ೧ – ಸ್ವಾಮಿ ಬ್ರಹ್ಮಾನಂದ

ಡಾ. ಕೆ. ಅನಂತರಾಮು

ಶ್ರೀರಾಮಕೃಷ್ಣ ಪರಮಹಂಸರ ಶಿಷ್ಯಕೋಟಿಯೆಂಬುದು ಸುಂದರವಾದೊಂದು ಉದ್ಯಾನವನವಿದ್ದಂತೆ ಎಂಬೊಂದು ರೂಪಕವನ್ನು ಸ್ವಾಮಿ ಸೋಮನಾಥಾನಂದರು ತಮ್ಮ ಪುಸ್ತಕದಲ್ಲಿ ಸೃಷ್ಟಿಸಿದ್ದಾರೆ. ಅದರಲ್ಲಿ ಆಕರ್ಷಕ ಬಣ್ಣಗಳಿಂದ ಕೂಡಿದ, "ಆಹಾ!" ಎನ್ನುವಂತಹ ಪರಿಮಳದಿಂದ ತುಂಬಿದ, ವೈವಿಧ್ಯಮಯವಾದ ಅನೇಕ ಕುಸುಮಗಳಿವೆ. ಒಂದರಂತೊಂದಿಲ್ಲ; ಒಂದರೊಳು ಕುಂದಿಲ್ಲ. ಶ್ರೀರಾಮಕೃಷ್ಣರೇ ಆ ಪುಣ್ಯಾರಾಮದ ಸಂರಕ್ಷಕರಾಗಿ ಆ ಹೂವುಗಳನ್ನೆಲ್ಲ ಸಕಾಲದಲ್ಲಿ ಕೊಯ್ದು, ಮಾಲೆಯಾಗಿ ಕೋದು, ಕಾಳೀಮಾತೆಯ ಕೊರಳಿನಲ್ಲಿ ರಾರಾಜಿಸುವಂತೆ ಮಾಡಿದ್ದಾರೆ. ಅಂತಹ ದಿವ್ಯ ಕುಸುಮಗಳಲ್ಲಿ ಸ್ವಾಮಿ ಬ್ರಹ್ಮಾನಂದರು ಮೊತ್ತಮೊದಲಿಗರಾಗಿದ್ದಾರೆ.

## ಬಾಲ್ಯಜೀವನ

ಸ್ವಾಮಿ ಬ್ರಹ್ಮಾನಂದರು ೧೮೬೩ ರ ಜನವರಿ ೨೧ ರಂದು ಕೊಲ್ಕತಾದ ಸಮೀಪದ ಸಿಕ್ರಾ ಎಂಬ ಗ್ರಾಮದ ಆನಂದಮೋಹನ ಘೋಷ್ ಮತ್ತು ಕೈಲಾಸಕಾಮಿನಿ ಎಂಬ ಭಕ್ತದಂಪತಿಗಳ ಮನೆಯಲ್ಲಿ ಜನ್ಮ ತಾಳಿದರು. ರಾಖಾಲಚಂದ್ರ ಘೋಷ್ ಎಂಬುದು ಅವರ ಹುಟ್ಟು ಹೆಸರಾಗಿತ್ತು. ಅವರಿಗೆ ಐದು ವರ್ಷ ತುಂಬುವುದರೊಳಗೆ ತಾಯಿ ತೀರಿಹೋದಳು. ಮಲತಾಯಿಯ ಆರೈಕೆಯಲ್ಲಿ ಅವರ ಬಾಲ್ಯಜೀವನ ಆರಂಭವಾಯಿತು. ಆನಂದಮೋಹನರು ತಕ್ಕಷ್ಟು ಸಿರಿವಂತರಾಗಿದ್ದುದರಿಂದ 'ತಮ್ಮ ಮಗನಿಗೂ ಆಯಿತು, ಊರ ಮಕ್ಕಳಿಗೂ ಆಯಿತು' ಎಂದು ಸಿಕ್ರಾ ಗ್ರಾಮದಲ್ಲಿ ಪ್ರಾಥಮಿಕ ಶಾಲೆಯೊಂದನ್ನು ಹೂಡಿಕೊಟ್ಟರು. ರಾಖಾಲರು ಆ ಶಾಲೆಯ ವಿದ್ಯಾರ್ಥಿಯಾಗಿ ಮೇಲೆ ಬಂದರು. ಚಿಣ್ಣಿಕೋಲು, ಮರಕೋತಿ, ಲಗ್ಗೆಚೆಂಡಾಟ ಮುಂತಾದ ಗ್ರಾಮೀಣ ಕ್ರೀಡೆಗಳು ಅವರಿಗೆ ತುಂಬಾ ಪ್ರಿಯವಾಗಿದ್ದವು. ಕುಸ್ತಿ ಕಲೆಯಲ್ಲಂತೂ ಅವರನ್ನು ಮೀರಿಸಬಲ್ಲ ಜೊತೆಗಾರರೇ ಇರಲಿಲ್ಲ. ಭಿಕ್ಷುಕರೋ ಸಾಧುಗಳೋ ಭಕ್ತಿಗೀತೆಗಳನ್ನು ಹಾಡುತ್ತ ತಮ್ಮ ಮನೆಯ ಮುಂದೆ ಬಂದರೆ, ಆ ಹಾಡುಗಳನ್ನು ರಾಖಾಲರು ತನ್ಮಯರಾಗಿ ಆಲಿಸುತ್ತಿದ್ದರು. ತಮ್ಮ ಮನೆಯ ಹತ್ತಿರದ ಕಾಳಿಕಾದೇವಿಯ ಗುಡಿಗೆ ಹೋಗುವುದು, ಮನೆಯಲ್ಲಿ ನಡೆಯುತ್ತಿದ್ದ ದುರ್ಗಾಪೂಜೆಯ ಸಂಭ್ರಮವನ್ನು ಅರ್ಚಕರ ಹತ್ತಿರವೇ ಕುಳಿತು ಶ್ರದ್ಧೆಯಿಂದ ವೀಕ್ಷಿಸುವುದು, ಗೆಳೆಯರೊಡನೆ ದೇವರ ಪೂಜೆಯ ಆಟವಾಡುವುದು, ಮಾವಿನ ತೋಪಿನಲ್ಲಿ



ಭಕ್ತಿಗೀತೆಗಳನ್ನು ಭಾವಪರವಶರಾಗಿ ಹಾಡುವುದು ಮುಂತಾದ ಚಟುವಟಿಕೆಗಳಿಂದ ಬಾಲ್ಯದಲ್ಲಿಯೇ ಅವರ ಅಂತರಂಗದಲ್ಲಿ ದೈವಭಕ್ತಿಯು ಮನೆಮಾಡಿತು.

ರಾಖಾಲರಿಗೆ ಹನ್ನೆರಡು ವರ್ಷ ತುಂಬುವ ಹೊತ್ತಿಗೆ ಊರಶಾಲೆಯ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಯಿತು. ಅಲ್ಲಿಂದ ಮುಂದಕ್ಕೆ ಕೊಲ್ಕತಾಗೆ ಹೋಗಿ ಆಂಗ್ಲಪ್ರೌಢಶಾಲೆಗೆ ಸೇರಿದರು. ಶಾಲೆಯ ವ್ಯಾಯಾಮಶಾಲೆಯೂ ಅವರನ್ನು ಸೆಳೆದಿತ್ತು. ಆ ಹೊತ್ತಿನಲ್ಲಿ ಕೇಶವಚಂದ್ರ ಸೇನರೆಂಬ ಮಹನೀಯರು 'ಬ್ರಹ್ಮಸಮಾಜ' ದ ಮುಂದಾಳುತ್ವ ವಹಿಸಿ ಸಗುಣ ನಿರಾಕಾರ ಈಶ್ವರನ ಭಕ್ತಿಯ ಪ್ರಚಾರದಲ್ಲಿ ತೊಡಗಿದ್ದರು. ರಾಖಾಲರು ಅದರ ಸದಸ್ಯರಾದರು. ಯೋಗಾಯೋಗವೆಂಬಂತೆ ಶಾಲೆಯಲ್ಲಾಗಲಿ, ವ್ಯಾಯಾಮ

ಶ್ರೀರಾಮಕೃಷ್ಣರ ೧೭೫ ನೇ ಜನ್ಮಮಹೋತ್ಸವದ ಅಂಗವಾಗಿ 'ವಿವೇಕಪ್ರಭ'ವು ಈ ವಿಶೇಷ ಲೇಖನಮಾಲೆಯನ್ನು ಆರಂಭಿಸುತ್ತಿದೆ. ಶ್ರೀರಾಮಕೃಷ್ಣರ ಎಲ್ಲ ಪ್ರತ್ಯಕ್ಷಶಿಷ್ಯರ ಪರಿಚಯವನ್ನು, ಮನಮೋಹಕ ಭಾಷೆ, ಉದಾತ್ತ ಹಾಗೂ ಸುಂದರ ಭಾವ, ಅನುಪಮ ಭಕ್ತಿ– ಇವುಗಳಿಂದ ಮಾಡಿಕೊಟ್ಟಿರುವ ಮಾನ್ಯ ಲೇಖಕರು ನಿವೃತ್ತ ಕನ್ನಡ ಪ್ರಾಧ್ಯಾಪಕರು. ಅತ್ಯಂತ ಸಹೃದಯರೂ, ಸಜ್ಜನರೂ ಆದ ಇವರು ಪ್ರಸಿದ್ಧ ವಾಗ್ಮಿಗಳು, ಸಂಶೋಧಕರು ಮತ್ತು ಖ್ಯಾತ ಬರಹಗಾರರು.

ಶಾಲೆಯಲ್ಲಾಗಲಿ, ಬ್ರಹ್ಮಸಮಾಜದಲ್ಲಾಗಲಿ ನರೇಂದ್ರರು (ಸ್ವಾಮಿ ವಿವೇಕಾನಂದ) ರಾಖಾಲರ ಗೆಳೆಯರಾಗಿ ಬಿಟ್ಟರು. ಬ್ರಹ್ಮಸಮಾಜದ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತ ಭಕ್ತಿಮಾರ್ಗದ ಪಥಿಕರಾಗಿಬಿಟ್ಟರು. ಜಪ ಧ್ಯಾನಗಳಲ್ಲಿ ಮೈಮರೆಯುತ್ತ, ಜನನಮರಣಗಳ ರಹಸ್ಯವನ್ನು ಚಿಂತಿಸುತ್ತ, ಪರಮಾತ್ಮನನ್ನು ಹೇಗೆ ಕಾಣುವುದು ಎಂದು ಹಂಬಲಿಸುತ್ತ ಆಗಲೇ ಆಂತರಂಗಿಕ ಸ್ವಭಾವವನ್ನು ಬೆಳೆಸಿಕೊಂಡುಬಿಟ್ಟರು. ಅದರ ಫಲವಾಗಿ ಶಾಲೆಯ ಪಾಠಗಳು ಅವರಿಗೆ ರುಚಿಸಲಿಲ್ಲ. ಓದಿನಲ್ಲಿ ಹಿಂದೆ ಬಿದ್ದರು.

### ಪರಮಹಂಸರ ದರ್ಶನ

ತಂದೆ ಆನಂದಮೋಹನರು ಮಗನ ಜಾಡನ್ನು ಕಣ್ಣಿಟ್ಟು ನೋಡಿದರು. ಭಕ್ತಿಯೆಂದರೆ, ಅಧ್ಯಾತ್ಮವೆಂದರೆ ಅದು 'ಅಡ್ಡದಾರಿ' ಎಂಬ ಭಾವನೆ ಅವರಿಗಿತ್ತು. 'ಸರಿದಾರಿ'ಗೆ ತರಬೇಕಾದರೆ ಮದುವೆಯೇ ಮದ್ದು ಎಂದು ಅವರು ನಿಶ್ಚಯಿಸಿದರು. ಬೇಗನೆ ಅದನ್ನು ಕಾರ್ಯರೂಪಕ್ಕೂ ತಂದುಬಿಟ್ಟರು. ವಿಶ್ವೇಶ್ವರಿಯೆಂಬ ಕನ್ಯೆಯೊಡನೆ ವಿವಾಹ ನಡೆದೇಹೋಯಿತು.

ಈ ಮೊದಲೇ ಗಂಗಾತೀರದಲ್ಲೊಮ್ಮೆ ರಾಖಾಲರು ಪರಮಹಂಸರ ದರ್ಶನವನ್ನು ಪಡೆದುಕೊಂಡಿದ್ದರು. "ಇಂದು ಬಾಲಕ, ನಾಳೆ ಸಾಧಕ, ಜಗನ್ಮಾತೆ ನನಗೊಬ್ಬ ಲೀಲಾಸಂಗಾತಿಯನ್ನು ದೊರಕಿಸಿಕೊಟ್ಟಿದ್ದಾಳೆ" ಎಂದು ಆಗಲೇ ಪರಮಹಂಸರು ಪುಳಕಿತರಾಗಿದ್ದರು. ಬ್ರಹ್ಮ ಸಮಾಜದ ಕೇಶವಚಂದ್ರರು ಪರಮಹಂಸರ ಮಹಿಮಾ ವಿಶೇಷಗಳನ್ನು ಬಲ್ಲವರಾಗಿದ್ದರು. ಅವರ ವಿಚಾರವಾಗಿ ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದರು. ಅದನ್ನು ಓದಿದ ರಾಖಾಲರು ಈ ಮೊದಲೇ ದರ್ಶನ ಮಾಡಿದ್ದ ಸದ್ಗುರುವಿನತ್ತ ವಿಶೇಷವಾಗಿ ಆಕರ್ಷಿತರಾದರು. ಆಗಾಗ ದಕ್ಷಿಣೇಶ್ವರಕ್ಕೆ ಹೋಗಿ, ಅವರ ಸನ್ನಿಧಿಯಲ್ಲಿ ನಿಂತು, ದಿವ್ಯಭಾವಗಳಿಂದ ಉದ್ದೀಪಿತರಾಗುತ್ತಿದ್ದರು. ತಮಗೆ ಬೇಕುಬೇಕಾದುದನ್ನೆಲ್ಲ ಕರುಣಿಸಬಲ್ಲ ಅಕ್ಷಯ ಪಾತ್ರೆಯೊಂದು ಇಲ್ಲಿದೆ ಎಂಬ ಭಾವನೆ ಅವರ ಮನದಲ್ಲಿ ನೆಲೆಯೂರಿತು.

ಆನಂದಮೋಹನರಿಗಾದರೋ ತಮ್ಮ ಹುಡುಗನಿಗೆ ಮದುವೆ ಮಾಡಿದರೂ ಅವನು 'ಸರಿದಾರಿ'ಗೆ ಬರಲಿಲ್ಲವಲ್ಲಾ ಎಂದು ಬೇಸರವಾಯಿತು. 'ನೀನು ದಕ್ಷಿಣೇಶ್ವರಕ್ಕೆ ಕಾಲಿಡಬಾರದು' ಎಂದು ಕಟ್ಟಪ್ಪಣೆ ಮಾಡಿದರು. ಕೊಠಡಿಗೆ ಬೀಗಹಾಕಿ ಬಂಧಿಸುವ ಯತ್ನವನ್ನೂ ಮಾಡಿದರು. ಆದರೆ ಅದೇನೂ ಫಲಕಾರಿಯಾಗಲಿಲ್ಲ. ಮದುವೆಯಾದುದೇ ಹೊರತು, ಆ ದಂಪತಿಗಳು ಸಾಂಸಾರಿಕ ಜೀವನಕ್ಕೆ ಕಾಲಿಡಲೇ ಇಲ್ಲ. ವಿಶ್ವೇಶ್ವರಿಯು ತಾಯಿಯ ಮನೆಯಲ್ಲಿಯೇ ಇರುತ್ತಿದ್ದಳು. ಒಂದು ಕೌತುಕದ ಸಂಗತಿಯೆಂದರೆ ವಿಶ್ವೇಶ್ವರಿ ಹಾಗೂ ಆಕೆಯ ತಾಯಿ ಶ್ಯಾಮಸುಂದರಿ ಪರಮಹಂಸರ ಭಕ್ತರೇ ಆಗಿದ್ದರು. ಹೀಗಾಗಿ ರಾಖಾಲರ ಆಧ್ಯಾತ್ಮಿಕ ಜೀವನಕ್ಕೆ ಯಾವುದೇ ಅಡ್ಡಿಆತಂಕಗಳು ಎದುರಾಗಲಿಲ್ಲ. ಒಮ್ಮೆ ಪರಮಹಂಸರು ಶ್ಯಾಮಸುಂದರಿಯನ್ನು ಉದ್ದೇಶಿಸಿ, "ನಿನ್ನ ಅಳಿಯ ಸಂನ್ಯಾಸಿಯಾಗುತ್ತಾನಂತಲ್ಲ" ಎಂದು ವಿನೋದದಿಂದ ಹೇಳಿದರು. ಆಕೆ ವಿಚಲಿತಳಾಗಲಿಲ್ಲ. "ಎಲ್ಲವೂ ಪರಮಾತ್ಮನ ಇಚ್ಛೆ. ಸಂನ್ಯಾಸಿಯಾಗುವುದಿದ್ದರೆ ಅದಕ್ಕಿಂತಲೂ ದೊಡ್ಡ ಭಾಗ್ಯ ಯಾವುದಿದೆ" ಎಂದು ಉತ್ತರಿಸಿ, ತನ್ನ ಪರಿಪಕ್ವತೆಯನ್ನು ಮೆರೆದಳು.

### ಕರಕಮಲಸಂಜಾತ

ರಾಖಾಲರು ಕ್ರಮಕ್ರಮವಾಗಿ ಪರಮಹಂಸರ ಕರಕಮಲಸಂಜಾತರಾಗಿಬಿಟ್ಟರು. ಎಳೆಯ ಬಾಲಕನಂತೆ ಅವರೊಡನೆ ಸಲುಗೆಯಿಂದ ವರ್ತಿಸುತ್ತ, ಅವರೊಡನೆ ತುಂಟಾಟವಾಡುತ್ತ, ಅವರಿಗೆ ಹಿಗ್ಗನ್ನೇ ತುಂಬಿದರು. ಪರಮಹಂಸರ ತೊಡೆಯ ಮೇಲೆ ಮಲಗಿಸಿಕೊಳ್ಳುವುದು, ಅವರ ಹೆಗಲೇರಿ ಕುಳಿತುಕೊಳ್ಳುವುದು, ಅವರಿಂದ ಬೆಣ್ಣೆ, ಹಾಲಿನ ಕೆನೆಗಳನ್ನು ತಿನ್ನಿಸಿಕೊಳ್ಳುವುದು ಮುಂತಾಗಿ ತಮ್ಮ ಬಾಲಲೀಲೆಗಳನ್ನು ಮೆರೆದರು. ಒಂದು ದಿನ ಪರಮಹಂಸರು "ನನಗೊಂದು ಬೀಡಾ ಮಾಡಿಕೊಡಪ್ಪಾ" ಎಂದು ಗೋಗರೆದರು. "ಇಲ್ಲ, ನನಗೆ ಬೀಡಾ ಮಾಡಲು ಬರುವುದಿಲ್ಲ" ಎಂದು ರಾಖಾಲರು ಹೇಳಿದರು. ಆಗ ಪರಮಹಂಸರು "ಅದೇನು ಬ್ರಹ್ಮವಿದ್ಯೆಯೇ, ಹೀಗೊಂದು ಎಲೆ ಸುತ್ತಿಕೊಟ್ಟರಾಯಿತು" ಎಂದರು. ಅಷ್ಟು ಹೇಳಿದರೂ ರಾಖಾಲರು, "ಇಲ್ಲ ಇಲ್ಲ, ನನಗದು ಬರುವುದಿಲ್ಲ" ಎಂದು ತಮ್ಮ ಹಠವನ್ನೇ ಸಾಧಿಸಿದರು. ರಾಖಾಲರ ಆ ವರ್ತನೆಯಿಂದ ಪರಮಹಂಸರು ಬೇಸರಗೊಳ್ಳಲಿಲ್ಲ. "ಈ ರಾಖಾಲನು ನನ್ನ ಮಾನಸಪುತ್ರನಲ್ಲವೆ, ಒಬ್ಬ ಮಗನಲ್ಲದೆ ಬೇರೆ ಯಾರು ತಾನೆ ಹೀಗೆ ಸಲಿಗೆಯಿಂದ ಎದುರಾಡಲು ಸಾಧ್ಯ" ಎಂದು ಸಂತೋಷವನ್ನೇ ಅನುಭವಿಸಿದರು. ಅದೇ ಸಮಯಕ್ಕೆ ನರೇಂದ್ರರೂ (ಸ್ವಾಮಿ ವಿವೇಕಾನಂದ) ಪರಮಹಂಸರ ಶಿಷ್ಯರಾಗಿ ಬಂದು ಸೇರಿದರು. ವ್ಯಾಯಾಮ ಶಾಲೆಯಲ್ಲಿ ಅಂಗಸಾಧನೆಯಲ್ಲಿ ಒಂದಾಗಿದ್ದವರು ಇಲ್ಲಿ ಆತ್ಮಸಾಧನೆಯಲ್ಲಿಯೂ ಒಂದಾದರು.

ಕ್ರಮಕ್ರಮವಾಗಿ ಪರಮಹಂಸರು ರಾಖಾಲರ ಸ್ವಭಾವದಲ್ಲಿದ್ದ ದೋಷಗಳನ್ನೆಲ್ಲ ನಿವಾರಿಸುತ್ತ ಅವರನ್ನೊಂದು ದಿವ್ಯಮಂಗಳವಿಗ್ರಹವಾಗಿ ರೂಪಿಸಿದರು. "ನನಗೆ ಭಾವ ಸಮಾಧಿಯನ್ನು ಕರುಣಿಸಿ" ಎಂದು ಆಗಾಗ ಅವರು

ಪರಮಹಂಸರನ್ನು ಪೀಡಿಸುತ್ತಿದ್ದರು. ಒಂದು ದಿನ ರಾಖಾಲರು ಪರಮಹಂಸರ ಪಾದಗಳನ್ನು ಒತ್ತುತ್ತ ಕುಳಿತಿದ್ದಾಗ, ಆ ಮಹಾಗುರುವಿನ ಸಂಕಲ್ಪಮಾತ್ರದಿಂದಲೇ ಅವರಿಗೆ ಭಾವಸಮಾಧಿ ಉಂಟಾಯಿತು. ಅಲ್ಲಿಂದ ಮುಂದಕ್ಕೆ ಆಧ್ಯಾತ್ಮಿಕ ಸಾಧನೆಯ ಕ್ರಮಗಳನ್ನೆಲ್ಲ ಹಂತ ಹಂತವಾಗಿ ಬೋಧಿಸಿದರು. "ಧ್ಯಾನಕ್ಕೆ ಕುಳಿತರೆ ಮನಸ್ಸು ನಿಲ್ಲುತ್ತಿಲ್ಲ, ಸುಮ್ಮನೆ ಅಲೆದಾಡುತ್ತಿದೆ, ನಾನು ಈ ಸಾಧನೆಗೆ ಯೋಗ್ಯನಲ್ಲವೋ ಏನೊ" ಎಂಬ ಭಾವನೆ ರಾಖಾಲರಲ್ಲಿ ಆಗಾಗ ಹುಟ್ಟುತ್ತಿತ್ತು. ಪರಮಹಂಸರು ಅದನ್ನೆಲ್ಲ ಸರಿಪಡಿಸಿದರು. ಧ್ಯಾನದಲ್ಲಿ ಏಕಾಗ್ರತೆಯು ಬಲಿಯಲೆಂದು ಒಂದು ದಿನ ರಾಖಾಲರ ನಾಲಗೆಯನ್ನು ಹೊರಕ್ಕೆ ಚಾಚಿಸಿ, ಅದರ ಮೇಲೆ ತಮ್ಮ ಬೆರಳಿನಿಂದ ಓಂಕಾರವನ್ನು ಬರೆದರು. ಕಾಮಭಾವನೆಗಳು ಅಳಿದು ಹೋಗಲೆಂದು ಮಂತ್ರಪಠನ ಮಾಡುತ್ತ ಅವರ ಎದೆಯನ್ನು ನೇವರಿಸಿದರು. ಅಷ್ಟೆಲ್ಲ ಆದ ಮೇಲೆ ರಾಖಾಲರ ಸಾಧನೆ ಸ್ಥಿರವಾಯಿತು.

### ಸಂನ್ಯಾಸಾಶ್ರಮ – ತೀರ್ಥಯಾತ್ರೆ

"ಅತಿವೃಷ್ಟಿಯಿಂದಲೋ ಅನಾವೃಷ್ಟಿಯಿಂದಲೋ ಒಂದು ವರ್ಷದ ಬೇಸಾಯವು ನಷ್ಟವಾದರೆ, ರೈತನು ಬೇಸಾಯ ಮಾಡುವುದನ್ನೇ ತೊರೆದು ಬಿಡುತ್ತಾನೆಯೇ? ಮನಸ್ಸಿಟ್ಟು ನಿಯಮಿತವಾಗಿ ಧ್ಯಾನ ಮಾಡಪ್ಪಾ" ಎಂದು ಶ್ರೀರಾಮಕೃಷ್ಣರು ರಾಖಾಲನಿಗೆ ತಿಳಿಸಿಕೊಟ್ಟರು. ತರುವಾಯ ಅವರಿಗೆ ದಿವ್ಯ ಮಂತ್ರೋಪದೇಶ ನೀಡಿದರು; ಕಾಳಿಕಾಮಾತೆಯ ದಿವ್ಯದರ್ಶನಭಾಗ್ಯ ಲಭಿಸುವಂತೆ ಮಾಡಿದರು. ಹೀಗೆ ಪರಮಹಂಸರು ತಮ್ಮ ಲೀಲಾಸಂಗಾತಿಯನ್ನು ಪುರುಷೋತ್ತಮನಾಗುವಂತೆ ರೂಪಿಸಿಬಿಟ್ಟರು. ತಮ್ಮ ಸಾಧನೆಯ ಬಲದಿಂದ ರಾಖಾಲರು ತೇಜಸ್ವಿಗಳಾಗಿ ಬೆಳೆದು ನಿಂತಾಗ, ಪರಮಹಂಸರೇ ಅವರನ್ನು, "ನೀನು ನಿತ್ಯಸಿದ್ಧರ ಗುಂಪಿಗೆ ಸೇರಿದವನಪ್ಪಾ" ಎಂದು ಕೊಂಡಾಡಿದರು.

ಪರಮಹಂಸರು ೧೮೮೬ ರಲ್ಲಿ ಮಹಾಸಮಾಧಿಯಲ್ಲಿ ಲೀನರಾದರು. ಆ ಬಳಿಕ ರಾಖಾಲರು ನರೇಂದ್ರರ ನೇತೃತ್ವದಲ್ಲಿ ವಿಧಿವತ್ತಾಗಿ ಸಂನ್ಯಾಸವನ್ನು ಸ್ವೀಕರಿಸಿದರು. 'ಬ್ರಹ್ಮಾನಂದ' ಎಂಬ ಸಂನ್ಯಾಸಾಶ್ರಮದ ಹೆಸರೂ ಅವರಿಗೆ ಸ್ವಾಮಿ ವಿವೇಕಾನಂದರಿಂದಲೇ ದೊರಕಿತು. ಆಗ ಸ್ವಾಮಿ ಬ್ರಹ್ಮಾನಂದರಿಗೆ ೨೪ ವರ್ಷ ವಯಸ್ಸಾಗಿತ್ತು. ತೀರ್ಥಯಾತ್ರೆಯೆಂಬುದು ಅವರಿಗೆ ಅತ್ಯಂತ ಪ್ರಿಯವಾದ ಹವ್ಯಾಸವಾಗಿತ್ತು. ಭರತಖಂಡದ ಹಲವು ದಿವ್ಯಧಾಮಗಳಲ್ಲಿ ಅವರು ಕಠಿಣ ತಪಶ್ಚರ್ಯೆ ಮಾಡಿದರು. ಕಾಶಿ, ಓಂಕಾರನಾಥ, ಪಂಚವಟಿ, ದ್ವಾರಕಾ, ವೃಂದಾವನ, ಮಥುರಾ, ಹರಿದ್ವಾರ ಮುಂತಾದ ತೀರ್ಥಗಳು ಅವರಿಗೆ ತೇಜಸ್ಸನ್ನು ತುಂಬಿದವು. ಓಂಕಾರನಾಥದಲ್ಲಿ ಆರು ಹಗಲು, ಆರು ರಾತ್ರಿ ಅವರು ಸಮಾಧಿಯಲ್ಲಿದ್ದುಬಿಟ್ಟರು. ಪಂಚವಟಿಯಲ್ಲಿ ಸೀತಾರಾಮರ ದಿವ್ಯದರ್ಶನದಿಂದ ರೋಮಾಂಚನಗೊಂಡರು. ವೃಂದಾವನದಲ್ಲಿ ಕೃಷ್ಣ ಪರಮಾತ್ಮನು ಅವರಿಗೆ ಒಬ್ಬ ವೃದ್ಧವೈಷ್ಣವ ಸಾಧುವಿನ ರೂಪದಲ್ಲಿ ಮೈದೋರಿದನು.

ವೃಂದಾವನದಲ್ಲೊಮ್ಮೆ ಅವರು ವಿರಾಮವಾಗಿ ಕುಳಿತಿದ್ದಾಗ ಭಕ್ತನೊಬ್ಬನು ಬಂದು, ನಮಸ್ಕರಿಸಿ, ಮೌನವಾಗಿ, ಸ್ವಾಮಿಗಳು ಬಳಸಿಕೊಳ್ಳಲೆಂದು, ಒಂದು ಕಂಬಳಿಯನ್ನು ಅವರ ಸನ್ನಿಧಿಯಲ್ಲಿಟ್ಟು ಹೊರಟು ಹೋದನು. ಸ್ವಾಮಿ ಬ್ರಹ್ಮಾನಂದರು ಯಾವ ಮಾತನ್ನೂ ಆಡಲಿಲ್ಲ. ಸ್ವಲ್ಪ ಹೊತ್ತಾದ ಮೇಲೆ ಇನ್ನೊಬ್ಬ ಮನುಷ್ಯನು ಬಂದು, ನೋಡನೋಡುತ್ತಿದ್ದಂತೆಯೇ ಆ ಕಂಬಳಿಯನ್ನು ತನ್ನದೆಂಬಂತೆ ಎತ್ತಿಕೊಂಡು, ಮೌನವಾಗಿ ಹೊರಟುಹೋದನು. ಸ್ವಾಮಿ ಬ್ರಹ್ಮಾನಂದರು ಆಗಲೂ ಮಾತನಾಡಲಿಲ್ಲ. "ಇದೆಲ್ಲ ಜಗನ್ಮಾತೆಯ ಲೀಲೆ, ಕೊಡುವವಳೂ ಅವಳೇ, ಹಿಂದಕ್ಕೆ ಪಡೆಯುವವಳೂ ಅವಳೇ" ಎಂದು ತಮಗೆ ತಾವೇ ಹೇಳಿಕೊಂಡರು.

### ಮಹಾಸಂಘದ ಮಹಾಗುರು

ಸ್ವಾಮಿ ವಿವೇಕಾನಂದರ ನಾಯಕತ್ವದಲ್ಲಿ ೧೮೯೭ ರಲ್ಲಿ ಸ್ಥಾಪನೆಗೊಂಡ ರಾಮಕೃಷ್ಣ ಮಿಷನ್, ಅನಂತರದ ಕಾಲದಲ್ಲಿ ವಟವೃಕ್ಷವಾಗಿ ಬೆಳೆದುದು ಸರಿಯಷ್ಟೆ. ೧೯೦೨ ರಲ್ಲಿ ಸ್ವಾಮಿ ವಿವೇಕಾನಂದರು ಮಹಾಸಮಾಧಿಯನ್ನು ಪಡೆದ ಮೇಲೆ ಆ ಮಹಾಸಂಘದ ಮಹಾಧ್ಯಕ್ಷರೂ ಸಂಘಗುರುವೂ ಆಗಿ ಅದನ್ನು ಮುನ್ನಡೆಸಿದ ಕೀರ್ತಿ ಸ್ವಾಮಿ ಬ್ರಹ್ಮಾನಂದರಿಗೆ ಸಲ್ಲುತ್ತದೆ.

ನಾಯಕತ್ವದ ಗುಣಗಳು ಅವರಲ್ಲಿರುವುದನ್ನು ಸ್ವಾಮಿ ವಿವೇಕಾನಂದರು ಗುರುತಿಸಿದ್ದರು. ಒಂದು ದಿನ ಸೋದರಸಂನ್ಯಾಸಿಗಳೆಲ್ಲ ಸುಖಸಂಕಥಾವಿನೋದದಲ್ಲಿ ಕುಳಿತಿರುವಾಗ ಸ್ವಾಮಿ ವಿವೇಕಾನಂದರು, "ರಾಖಾಲನನ್ನು ನಾವು ಇಂದಿನಿಂದ 'ರಾಜ' ಎಂದು ಕರೆಯೋಣ" ಎಂದರು. ಎಲ್ಲರೂ ಅದಕ್ಕೊಪ್ಪಿದರು. "ರಾಖಾಲನಿಗೆ ರಾಜನೊಬ್ಬನಿಗಿರಬೇಕಾದ ಬುದ್ಧಿಶಕ್ತಿ, ವಿವೇಕ, ದೂರದೃಷ್ಟಿ ಮೊದಲಾದ ಎಲ್ಲ ಸದ್ಗುಣಗಳೂ ಇವೆಯಪ್ಪಾ, ಅವನು ಮನಸ್ಸು ಮಾಡಿದರೆ ಒಂದು ಸಾಮ್ರಾಜ್ಯವನ್ನೇ ಕಟ್ಟಿ ಆಳಬಲ್ಲ" ಎಂದು ಪರಮಹಂಸರೂ ಸ್ವಾಮಿ ವಿವೇಕಾನಂದರೊಡನೆ ಹೇಳಿದ್ದರು. ಅದರಂತೆ ಆ ಮಹಾಸಂಘವನ್ನು ಇಪ್ಪತ್ತು ವರ್ಷಗಳ ಕಾಲ ಸ್ವಾಮಿ ಬ್ರಹ್ಮಾನಂದರು ಸತ್ಪಥದಲ್ಲಿ ನಡೆಸಿದರು.